ಯೋಜನೇತರ ವೆಚ್ಚವನ್ನು ಕಡಿವೆಂ ಮಾಡಲು ತೆಗೆದಂಕೊಂಡ ಕ್ರಮಂ ಮತ್ತು ಅದರಿಂದ ದೊರೆತ ಉಳಿತಾಯ,

೧೨೯. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ನೇ ಸಾಲಿನ ಯೋಜನೇತರ ಬಾಬಿನ ಒಟ್ಟು ವೆಚ್ಚವೆಷ್ಟು ?

ಆ) ರಾಜ್ಯದ ಯೋಜನೇತರ ವೆಚ್ಚವನ್ನು ಕಡಿವೆಂ ಮಾಡಲು ತೆಗೆದುಕೊಂಡ ಕ್ರಮಗಳೇನು ಮತ್ತು ಇದರ ಪರಿಣಾಮದಿಂದ ಏನಾದರೂ ಉಳಿತಾಯವಾಗಿದೆಯೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ೧೯೮೭–೮೮ನೇ ಸಾಲಿನ ಬಜೆಟ್ ಅಂದಾಜಂಗಳ ಪ್ರಕಾರ ಯೋಜನೇತರ ಬಾಬಿನ ವೆಚ್ಚ ೨೨೦೪ ಕೋಟಿ ರೂ.ಗಳು.

ಆ) i) ಶೂನ್ಯಧಾರಿತ ಆಯವ್ಯಯ ಕ್ರಮವನ್ನು ಸರ್ಕಾರವು ಜಾರಿಗೆ ತರಲು ನಿರ್ಧರಿಸಿದೆ. ಅದರ ಪ್ರಕಾರ ಯಾವ ಬಾಬುಗಳ ವೆಚ್ಚವನ್ನು ಕೈಬಿಡಬಹುದೋ ಅಂತಹವುಗಳನ್ನು ಗುರುತಿಸಲಾಗಿದ್ದು, ಪರಿಣಾಮವಾಗಿ ೩೦ ಕೋಟಿ ರೂ.ಗಳ ಉಳಿತಾಯದ ಸಾಧ್ಯತೆ ಇದೆ. ವೆಚ್ಚದಲ್ಲಿ ಕಡಿತವನ್ನು ಜಾರಿಗೆ ತರುವಂತೆ ಆದೇಶವನ್ನು ಹೊರಡಿಸುವಂತೆ ಸಂಬಂಧಪಟ್ಟ ಇಲಾಖೆಗಳನ್ನು ಕೋರಲಾಗಿದೆ.

ii) ಯೋಜನೇತರ ಬಜೆಟ್‌ನಲ್ಲಿ ಸಾಮಾನ್ಯವಾಗಿ ೧೦% ಕಡಿತವನ್ನು ಮಾಡಲು ನಿರ್ಧರಿಸಿದ್ದು ಅದಕ್ಕೆನುಗುಣವಾಗಿ ಬಜೆಟ್ ವೆಚ್ಚವನ್ನು ಸೀಮಿತಗೊಳಿಸುವಂತೆ ಎಲ್ಲಾ ಇಲಾಖೆಗಳಿಗೂ ಕೋರಲಾಗಿದೆ. ಆರ್ಥಿಕ ಮಿತವ್ಯಯ ಕ್ರಮಗಳನ್ನು ಅನುಷ್ಠಾನಕ್ಕೆ ತರುವುದರಿಂದಲೂ ಮತ್ತು ಇಲಾಖೆಯಿಂದ ತೆಗೆದುಕೊಂಡ ಮತ್ತಷ್ಟು ಕ್ರಮಗಳಿಂದ ವೆಚ್ಚದಲ್ಲಿ ಉಳಿತಾಯವನ್ನು ಮಾಡುವ ಸಾಧ್ಯತೆ ಇದೆ.

iii) ಹೊಸ ಹುದ್ದೆಗಳ ಸೃಜನೆಯನ್ನು ಮತ್ತು ಹೊಸ ವಾಹನಗಳ ಖರೀದಿಯನ್ನು ತಡೆಯುವುದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದು, ಸಮ್ಮೇಳನಗಳು ಟೆಲಿಫೋನ್ ಮತ್ತು ವಿದ್ಯುತ್ ಮುಂತಾದವುಗಳ ವೆಚ್ಚವನ್ನು ಮಿತಗೊಳಿಸುವಂತಹ ಮಿತವ್ಯಯ ಕ್ರಮಗಳನ್ನು ಜಾರಿಗೆ ತರಲಾಗಿದೆ.

ಈ ವರ್ಷದಲ್ಲಿ ೭೫.೦೦ ಕೋಟಿ ರೂ.ಗಳ ಉಳಿತಾಯವನ್ನು ಅಂದಾಜು ಮಾಡಲಾಗಿದೆ.

ಸರ್ಕಾರಿ ನೌಕರರ ನಿವೃತ್ತಿಯ ಬಗ್ಗೆ

೯೫ ಶ್ರೀ ಎ. ಕೃಷ್ಣಪ್ಪ (ವರ್ತೂರು) —ಮಾನ್ಯ ಮುಖ್ಯ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭ರ ಅಂತ್ಯಕ್ಕೆ ಎಷ್ಟು ಸರ್ಕಾರಿ ನೌಕರರು ನಿವೃತ್ತರಾಗಲಿದ್ದಾರೆ,

ಆ) ಇದರಿಂದ ರಾಜ್ಯ ಬೊಕ್ಕಸಕ್ಕೆ ತಗಲುವ ವೆಚ್ಚ ಎಷ್ಟು,

ಇ) ಯಾವ ಯಾವ ದರ್ಜೆ ನೌಕರರು ಎಷ್ಟೆಷ್ಟು ಸಂಖ್ಯೆಯಲ್ಲಿ ನಿವೃತ್ತರಾಗುತ್ತಾರೆ,

ಈ) ೧೯೮೭ರ ಜುಲೈ ಅಂತ್ಯದವರೆಗೆ ಕೆ.ಸಿ.ಎಸ್.ಆರ್. ನಿಯಮ ೨೮೫ರ ಅಡಿಯಲ್ಲಿ ಕಡ್ಡಾಯವಾಗಿ ನಿವೃತ್ತಿಯಾಗಿರುವ ನೌಕರರ ಸಂಖ್ಯೆ ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೯೮೪ರ ಆಗಸ್ಟ್‌ನಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಹೆಚ್ಚಿಸಲಾಯಿತು. ಇದರಿಂದಾಗಿ ಸರ್ಕಾರಿ ನೌಕರರ ನಿವೃತ್ತಿ ೧೯೮೭ರ ಆಗಸ್ಟ್ ೩೧ ರಿಂದ ಪ್ರಾರಂಭವಾಗುತ್ತದೆ ಮತ್ತು ೧೯೮೭ರ ಅಂತ್ಯದವರೆಗೆ ಸುಮಾರು ೨೦೦೦ ನೌಕರರು ನಿವೃತ್ತರಾಗುವರೆಂದು ನಿರೀಕ್ಷಿಸಲಾಗಿದೆ.

ಅ) ನಿವೃತ್ತರಾಗಲಿರುವ ನೌಕರರಿಗೆ ಕೊಡಬೇಕಾದ ನಿವೃತ್ತಿ ವೇತನ, ಗ್ರಾಚುಯಿಟಿ, ಇತ್ಯಾದಿ ಬಾಬ್ತುಗಳಿಗೆ ತಗಲುವ ವೆಚ್ಚವನ್ನು ನಿವೃತ್ತರಾಗಲಿರುವ ಪ್ರತಿ ನೌಕರರ ಪ್ರಕರಣಗಳಲ್ಲೂ ಪ್ರತ್ಯೇಕವಾಗಿ, ನಿವೃತ್ತರಾದ ನಂತರ ನಿರ್ಧರಿಸಬೇಕಾಗುವುದು. ಆದುದರಿಂದ ನಿರ್ದಿಷ್ಟ ಅಂಕಿ ಸಂಖ್ಯೆಗಳು ಲಭ್ಯವಿಲ್ಲ.

ಇ) ಈ ಬಗ್ಗೆ ನಿರ್ದಿಷ್ಟ ಮಾಹಿತಿ ಸಧ್ಯಕ್ಕೆ ಲಭ್ಯವಿಲ್ಲ.

ಈ) ಜೂನ್ ೧೯೮೫ ರಿಂದ ಜುಲೈ ೧೯೮೭ರ ಅಂತ್ಯದವರೆಗೆ ೧೧೧ ಸರ್ಕಾರಿ ನೌಕರರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲಾಗಿದೆ.

ಉಳ್ಳಾಲ ಕ್ಷೇತ್ರದಲ್ಲಿ ಸಿಟಿ ಬಸ್ಸುಗಳ ಅಪಘಾತದ ಬಗ್ಗೆ

೨೦೯ ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಳ್ಳಾಲ ಕ್ಷೇತ್ರದ ಕಂಕನಾಡಿಯಿಂದ ತಲಪಾಡಿವರೆಗೆ ೬೦ಕ್ಕೂ ಮೀಕ್ಕಿ ಸಿಟಿ ಬಸ್ಸುಗಳು ಹಾಗೂ ಇನ್ನಿತರ ಪ್ರಯಾಣಿಕರ ಬಸ್ಸುಗಳು ಓಡಾಡುತ್ತಿದ್ದು ಅಲ್ಲಿ ಮಿತಿಮೀರಿದ ವಾಹನ ಅಪಘಾತಗಳು ಆಗುತ್ತಿರುವುದಕ್ಕೆ ಕಾರಣಗಳೇನು ?

ಆ) ವೇಗ ಓವರ್‌ಲೋಡ್ ಓವರ್‌ಟೇಕ್ ಮುಂತ್ತಿ ಕಾರಣಗಳಾಗಿದ್ದು ಇದನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದೆಯೇ ?

ಇ) ಇನ್ನು ಮುಂದೆ ಅಪಘಾತಗಳಾಗದಂತೆ ವಿಶೇಷ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಉಳ್ಳಾಲ ಕ್ಷೇತ್ರದ ಕಂಕನಾಡಿಯಿಂದ ತಲಪಾಡಿಯು ರಾಷ್ಟ್ರೀಯ ಹೆದ್ದಾರಿ ನಂ. ೧೭ ಆಗಿರುತ್ತದೆ. ಆದ್ದರಿಂದ ವಾಹನ ಸಂಚಾರ ಜಾಸ್ತಿಯಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ೧೯೮೭ರಲ್ಲಿ ಅಪಘಾತಗಳು ಆಗಿರುತ್ತದೆ.

ಆ) ಮೋಟಾರು ವಾಹನಗಳ ತಪಾಸಣೆಯು ನಡೆಯುತ್ತಾಯಿರುತ್ತದೆ. ೧೯೮೭ರಲ್ಲಿ ವೇಗವಾಗಿ ಚಲಿಸುತ್ತಿರುವ ವಾಹನಗಳ ಮೇಲೆ ೫೧ ಮೊಕದ್ದಮೆಗಳನ್ನು ಬಸ್ಸುಗಳಲ್ಲಿ ೧೨೦ ಓವರ್‌ಲೋಡ್ ಮೊಕದ್ದಮೆಗಳನ್ನು ವಾಹನಗಳಲ್ಲಿ ಓವರ್‌ಲೋಡ್‌ಗಳಾದ ಬಗ್ಗೆ ೭೬ ಕೇಸುಗಳನ್ನು ಮತ್ತು ಅಜಾಗರೂಕತೆಯಿಂದ ನಡೆಸಲ್ಪಟ್ಟವರ ಮೇಲೆ ೩೪ ಮೊಕದ್ದಮೆಗಳನ್ನು ಹೂಡಲಾಗಿರುತ್ತದೆ.

ಇ) ಮೋಟಾರು ವಾಹನ ತಪಾಸಣೆಯು ಪ್ರತಿನಿತ್ಯವು ಕಂಕನಾಡಿಯಿಂದ ತಲಪಾಡಿಯವರೆಗೆ ನಡೆಯುತ್ತಾಯಿರುತ್ತದೆ.

ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಫೆಬ್ರವರಿ ೧೯೮೭ ರಿಂದ ಜುಲೈ ೧೯೮೭ರ ವರೆಗೆ ಹಂಚಿರುವ ಪಾಮ್ ಆಯಿಲ್ ವಿವರದ ಬಗ್ಗೆ

೧೪೧ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಶಿವಮೊಗ್ಗ ಜಿಲೆ ಗೆ ಕಳೆದ ೬ ತಿಂಗಳಿಂದ ಅಂದರೆ ಫೆಬ್ರವರಿ ೧೯೮೭ ರಿಂದ ಜುಲೈ ೧೯೮೭ರ ವರೆಗೆ ಪ್ರತಿ ತಿಂಗಳು ಹಂಚಿಕೆ ಮಾಡಿರುವ ಪಾಮ್ ಆಯಿಲ್ ಪ್ರಮಾಣ ಎಷ್ಟು,

೨. ಸದರಿ ಅವಧಿಯಲ್ಲಿ ರಾಜ್ಯದಲ್ಲಿ ಪ್ರತಿ ಜಿಲ್ಲೆಗಳಿಗೆ ಹಂಚಿಕೆ ಮಾಡಿರುವ ಪಾಮ್ ಎಣ್ಣೆ ಪ್ರಮಾಣವೆಷ್ಟು ?